ಸಂಖ್ಯೆ :                                                                 ದಿನಾಂಕ: 18.6.2015

**ಸುತ್ತೋಲೆ**

ವಿಷಯ : ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲು ಗ್ರಾಮ ಮಟ್ಟದ ಹಾಗೂ ಜಿಲ್ಲಾಮಟ್ಟದ ಸಮಾಲೋಚನಾ ಸಭೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ : ದಿನಾಂಕ 12.6.2015 ರಂದು ನಡೆದ ಟೆಲಿಕಾನ್ಫರೆನ್ಸ್

*******

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವ ಬಗೆ ಗ್ರಾಮಮಟ್ಟದಿಂದ ಜಿಲ್ಲಾಮಟ್ಟದವರೆಗೆ ಸಮಾಲೋಚನಾ ಸಭೆಗಳನ್ನು ನಡೆಸುವ ಕುರಿತಂತೆ ದಿನಾಂಕ 12.6.2015 ರಂದು ಟೆಲಿಕಾನ್ಫರೆನ್ಸ್ ನಡೆಸಿ ವಿವರವಾದ ಮಾರ್ಗದರ್ಶನವನ್ನು ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ಪ್ರಶ್ನಾವಳಿಗಳು, ಪ್ರೆಸೆಂಟೇಷನ್, ಮಾರ್ಗದರ್ಶನ ಕೈಪಿಡಿ ಮುಂತಾದವುಗಳನ್ನೂ ಸಹ ಈಗಾಗಲೇ ಕಳುಹಿಸಲಾಗಿದೆ. ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿಯೂ ಸಹ ಪ್ರಶ್ನಾವಳಿಗಳು ಹಾಗೂ ಪ್ರೆಸೆಂಟೇಷನ್ ಅಳವಡಿಸಿಲಾಗಿದೆ.

ಮುಂದುವರೆದಂತೆ, ನೋಡಲ್ ಅಧಿಕಾರಿಗಳನ್ನು ನೇಮಿಸಿ, ವಿವರವನ್ನು ಕಳುಹಿಸಲು ತಿಳಿಸಲಾಗಿದ್ದರೂ, ಅನೇಕ ಜಿಲ್ಲೆಯವರು ಇನ್ನೂ ವಿವರವನ್ನು ಕಳುಹಿಸಿರುವುದಿಲ್ಲ. ಕೂಡಲೇ ವಿವರಗಳನ್ನು ಕಳುಹಿಸುವುದು ಅಲ್ಲದೇ, ಟೆಲಿಕಾನ್ಫರೆನ್ಸ್‌ನಲ್ಲಿ ಹೇಳಿರುವಂತೆ ಸಮಾಲೋಚನಾ ಸಭೆಗಳನ್ನು ನಡೆಸಲು ನೋಡಲ್ ಅಧಿಕಾರಿಗಳು ಕೆಳಕಂಡಂತೆ ಸಮಿತಿಗಳನ್ನು ರಚಿಸುವುದು.

- **ಗ್ರಾಮಮಟ್ಟದ ಸಮಿತಿ :**

  - ವಿಲೇಜ್ ಎಜುಕೇಷನ್ ಸಮಿತಿ ಸದಸ್ಯರು – 9 ಸದಸ್ಯರು
  - ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಪ್ರತಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು
  - ಪ.ಜಾತಿ / ಪ.ಪಂಗಡ, ಇತರೆ ಹಿಂದುಳಿದ ಪಂಗಡದ ಪ್ರತಿನಿಧಿಗಳು – 4
  - ಪ್ರತಿ ಶಾಲೆಯ ಶಿಕ್ಷಕರು, ಪೋಷಕರು, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿ.
  - ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಆಯ್ದ ಉಪನ್ಯಾಸಕರು
  - ಗ್ರಾಮಮಟ್ಟದ ವಯಸ್ಕರ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಸಿಬ್ಬಂದಿ

ಗ್ರಾಮ ಮಟ್ಟದ ಪ್ರಕ್ರಿಯೆ :

- ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಸಮಾಲೋಚನಾ ಸಭೆಗಳು ನಡೆಯುವ ಬಗ್ಗೆ ಕನಿಷ್ಠ ಒಂದು ವಾರದ ಪ್ರಚಾರ.
- ನಿಗಧಿತ ದಿನಾಂಕದಂದು ಆಯಾ ಹಂತದ ಎಲ್ಲಾ ಪ್ರತಿನಿಧಿಗಳು ಸಭೆ ಸೇರುವಂತೆ ನೋಡಿಕೊಳ್ಳುವುದು.
- ಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಅವಕಾಶ ಮಾಡಿಕೊಡುವುದು.
- ಸಂಪೂರ್ಣ ಸಭೆಯ ಪ್ರಕ್ರಿಯೆಯನ್ನು ಕನಿಷ್ಠ 2–3 ಗಂಟೆಗಳ ಅವಧಿಯವರೆಗೆ ನಡೆಸುವುದು.
- ಇಲಾಖೆಯಿಂದ ನೇಮಿಸಲಾಗಿರುವ ನೋಡಲ್ ಅಧಿಕಾರಿಗಳು ಸಭೆಯ ಉಸ್ತುವಾರಿಯನ್ನು ವಹಿಸುವುದು. ಅಭಿಪ್ರಾಯಗಳನ್ನು ಬರೆದುಕೊಳ್ಳಲು ಆಯ್ದ ಇಬ್ಬರು ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವುದು.
- ನೋಡಲ್ ಅಧಿಕಾರಿಗಳು ಸಂಬಂಧಪಟ್ಟ 13 ವಿಷಯಗಳ ಒಂದೊಂದೇ ಪ್ರಶ್ನೆಯನ್ನು ಸಭೆಯ ಮುಂದೆ ಮಂಡಿಸಿ, ಅವರಿಂದ ಬರುವ ಉತ್ತರವನ್ನು ದಾಖಲಿಸುವುದು.

- ಸಭೆಯ ಅಂತ್ಯದಲ್ಲಿ ದಾಖಲಿಸಿದ ಮಾಹಿತಿಯ ಸಾಫ್ಟ್ ಪ್ರತಿಯನ್ನು MyGov.in ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಹಾರ್ಡ್ ಪ್ರತಿಯನ್ನು ಬ್ಲಾಕ್ ಹಂತಕ್ಕೆ ತಲುಪಿಸುವುದು.

- **ಬ್ಲಾಕ್ ಶಿಕ್ಷಣ ಸಮಿತಿ :**
  - ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯ್ದ ಪ್ರತಿನಿಧಿಗಳು
  - ಬ್ಲಾಕ್‌ಗೆ ಸಂಬಂಧಿಸಿದ ಆಯ್ದ ಶಾಲೆಗಳ ಮುಖ್ಯಸ್ಥರು, ಶಿಕ್ಷಕರು, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿ.
  - ಡಯಟ್ ಪ್ರತಿನಿಧಿಗಳು, ವಿಷಯ ಪರಿವೀಕ್ಷಕರು
  - ಎಲ್ಲಾ ಬಿ.ಆರ್.ಸಿ.ಗಳು ಹಾಗೂ ಸಿ.ಆರ್.ಪಿ.ಗಳು
  - ಆಯ್ದ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು
  - ಬ್ಲಾಕ್ ಗೆ ಸಂಬಂಧಿಸಿದ ವಯಸ್ಕರ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣದ ಅಧಿಕಾರಿಗಳು

- ಬ್ಲಾಕ್ ಹಂತದ ಪ್ರಕ್ರಿಯೆ :

  - ಬ್ಲಾಕ್ ಸಮಿತಿಯ ಸದಸ್ಯರು ಮೊದಲು ತಮ್ಮ ಬ್ಲಾಕಿಗೆ ಸಂಬಂಧಿಸಿದ ಎಲ್ಲಾ ಗ್ರಾಮಪಂಚಾಯಿತಿಯ ಉತ್ತರ ಪ್ರತಿಗಳ ಮೇಲೆ ಚರ್ಚಿಸಿ, ಕ್ರೋಢೀಕೃತ ಒಂದು ಪ್ರತಿಯನ್ನು ಸಿದ್ಧಮಾಡಿಕೊಳ್ಳುವುದು.
  - ಬ್ಲಾಕ್ ನೋಡಲ್ ಅಧಿಕಾರಿಗಳು ಬ್ಲಾಕ್ ಹಂತದ ಸಭೆ ನಡೆಯುವಾಗ ಸಂಬಂಧಿಸಿದ 13 ವಿಷಯಗಳ ಪ್ರಶ್ನೆಗಳನ್ನು ಮಂಡಿಸಿ, ಚರ್ಚಿಸಿ, ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಸಿದ್ಧಪಡಿಸುವುದು.
  - ಸಭೆಯ ಅಂತ್ಯದಲ್ಲಿ ದಾಖಲಿಸಿದ ಮಾಹಿತಿಯ ಸಾಫ್ಟ್ ಪ್ರತಿಯನ್ನು MyGov.in ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಹಾರ್ಡ್ ಪ್ರತಿಯನ್ನು ಜಿಲ್ಲಾ ಹಂತಕ್ಕೆ ತಲುಪಿಸುವುದು.

- **ಜಿಲ್ಲಾ ಹಂತದ ಸಮಿತಿ :**

  - ಜಿಲ್ಲಾ ಕಲೆಕ್ಟರ್ / ಮ್ಯಾಜಿಸ್ಟ್ರೇಟ್ / ಲೋಕಸಭಾ ಸದಸ್ಯರು / ವಿಧಾನಸಭಾ ಸದಸ್ಯರು
  - ಉಪನಿರ್ದೇಶಕರು (ಆಡಳಿತ), ಶಿಕ್ಷಣಾಧಿಕಾರಿಗಳು
  - ಉಪನಿರ್ದೇಶಕರು (ಅಭಿವೃದ್ಧಿ), ಉಪನ್ಯಾಸಕರು
  - ಜಿಲ್ಲಾ ಪಂಚಾಯತ್ ಸದಸ್ಯರು
  - ಜಿಲ್ಲಾ ಶಿಕ್ಷಣ ಸಮಿತಿಯ ಸದಸ್ಯರು
  - ಆಯ್ದ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಮುಖ್ಯಸ್ಥರು ಹಾಗೂ ಶಿಕ್ಷಕರು
  - ಆಯ್ದ ಎಸ್.ಡಿ.ಎಂ.ಸಿ.ಯ ಅಧ್ಯಕ್ಷರು, ವಿದ್ಯಾರ್ಥಿ ಪ್ರತಿನಿಧಿಗಳು
  - ಜಿಲ್ಲಾ ವಯಸ್ಕರ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣದ ಅಧಿಕಾರಿಗಳು.

- ಜಿಲ್ಲಾ ಹಂತದ ಪ್ರಕ್ರಿಯೆ :
  - ಚರ್ಚಾ ವಿಷಯಗಳು ಮತ್ತು ಸಂಬಂಧಿಸಿದ ಪ್ರಶ್ನೆಗಳನ್ನು ನೀಡುವುದು.
  - ಜಿಲ್ಲಾ ಕಲೆಕ್ಟರ್ / ಮಾಜಿಸ್ಟ್ರೇಟರ್ ಜೊತೆಗೆ ಲೋಕಸಭಾ ಸದಸ್ಯರು / ವಿಧಾನಸಭಾ ಸದಸ್ಯರು ಮುಂತಾದ ವಿವಿಧ ಅನುಷ್ಠಾನಾಧಿಕಾರಿಗಳ ಕಾರ್ಯಾಗಾರವನ್ನು ನಡೆಸುವುದು.

- o ಬ್ಲಾಕ್‌ಮಟ್ಟದ ನಿರ್ಣಯಗಳ ಕ್ರೋಢೀಕರಣ ಹಾಗೂ ಜಿಲ್ಲಾ ಮಟ್ಟದ ಹೊಸ ವಿಷಯಗಳ ಸೇರ್ಪಡೆ ಮಾಡಿದ ದಾಖಲೆಯನ್ನು ಜಿಲ್ಲಾ ಮಟ್ಟದಲ್ಲಿ ಶಿಫಾರಸ್ಸು ಮಾಡುವುದು.
- o ಸಭೆಯ ಅಂತ್ಯದಲ್ಲಿ ದಾಖಲಿಸಿದ ಮಾಹಿತಿಯ ಸಾಫ್ಟ್ ಪ್ರತಿಯನ್ನು MyGov.in ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಹಾರ್ಡ್ ಪ್ರತಿಯನ್ನು ಜಿಲ್ಲಾ ಹಂತಕ್ಕೆ ತಲುಪಿಸುವುದು.

- **ಹಣಕಾಸು ಮಾಹಿತಿ :**

**ಎಲ್ಲಾಮಟ್ಟದ ಸಮಾಲೋಚನಾ ಸಭೆಗಳಲ್ಲಿ ಖರ್ಚು ಮಾಡಬಹುದಾದ ವೆಚ್ಚ :**

- ಪ್ರಶ್ನಾವಳಿಗಳನ್ನು ಮುದ್ರಿಸಲು – 1 ಪುಟಕ್ಕೆ ರೂ.15.00
- ಭಾಗೀದಾರರ ಊಟದ ವೆಚ್ಚ – ಒಬ್ಬರಿಗೆ ರೂ.50.00
- ಜಿಲ್ಲಾಮಟ್ಟದಲ್ಲಿ ಮಾತ್ರ ಭಾಷಾಂತರಕ್ಕಾಗಿ ಪ್ರತಿ ಪುಟಕ್ಕೆ ರೂ.2.00

ಯಾವುದೇ ಅನುಮಾನವಿದ್ದಲ್ಲಿ, ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಪ್ರೆಸೆಂಟೇಷನ್ ನೋಡುವುದು ಇಲ್ಲದಿದ್ದಲ್ಲಿ ಸಹಾಯವಾಣಿಯ ಅಧಿಕಾರಿಗಳನ್ನು ಸಂಪರ್ಕಿಸುವುದು. ಸಹಾಯವಾಣಿ ಅಧಿಕಾರಿಗಳ ಮೊಬೈಲ್ ಸಂಖ್ಯೆಯು ಪ್ರಸೆಂಟೇಷನ್‌ನಲ್ಲಿ ನೀಡಲಾಗಿರುತ್ತದೆ.

ಇದು ಸಮಯ ನಿರ್ಭಂದಿತ ಕಾರ್ಯವಾಗಿದ್ದು, ಸಮಾಲೋಚನಾ ಸಭೆಗಳ ವೇಳಾಪಟ್ಟಿಯನ್ನು ಈಗಾಗಲೇ ಕಳುಹಿಸಿದ್ದು, ವೇಳಾಪಟ್ಟಿಯನ್ನು ತಪ್ಪದಂತೆ ಅನುಸರಿಸುವುದು.

ಸಧ್ಯದಲ್ಲಿ ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಪ್ರಕ್ರಿಯೆ ಪ್ರಾರಂಭಿಸುವುದು. ಸರ್ಕಾರದಿಂದ ಎನ್.ಇ.ಪಿ.ಅನುದಾನ ಅನುಮೋದಿತವಾದ ನಂತರ, ವೆಚ್ಚವಾದ ಅನುದಾನವನ್ನು ಸರಿಹೊಂದಿಸಲಾಗುವುದು.

ಉಪನಿರ್ದೇಶಕರು (ಆಡಳಿತ)ರವರು ಈ ಸುತ್ತೋಲೆಯನ್ನು ಕೆಳಹಂತದ ಎಲ್ಲಾ ನೋಡಲ್ ಅಧಿಕಾರಿಗಳಿಗೆ ತಲುಪುವಂತೆ ಕ್ರಮ ವಹಿಸುವುದು ಹಾಗೂ ಸಮಾಲೋಚನಾ ಸಭೆಗಳು ಯಶಸ್ವಿಯಾಗಿ ನಡೆಯಲು ಸಹಕರಿಸುವುದು.

**ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರು ಎಲ್ಲಾ ಪ್ರಕ್ರಿಯೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಿ, ಸಮಾಲೋಚನಾ ಸಭೆಗಳನ್ನು ಯಶಸ್ವಿಯಾಗಿ ನಡೆಸಿ, ಸದರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ತಿಳಿಸಿದೆ.**

**(ಸಹಿ)**
ನಿರ್ದೇಶಕರು (ಪ್ರೌಢಶಿಕ್ಷಣ)
ಹಾಗೂ ರಾಜ್ಯ ನೋಡಲ್ ಅಧಿಕಾರಿಗಳು
ಹೊಸ ರಾಷ್ಟ್ರೀಯ ಶಿಕ್ಷಣ ನೀತಿ
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು,

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ ಮತ್ತು ಧಾರವಾಡರವರಿಗೆ ಮಾಹಿತಿಗಾಗಿ.
4. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.
6. ಕಚೇರಿ ಪ್ರತಿ